ಸೌಂದರ್ಯದ ಸೂಜಿಗಲ್ಲುಗಳ ಸಾಲಿನಲ್ಲಿ ನಿಂತಿದ್ದ ನಟಿ ಲಾರಾ ದತ್ತ ಮೊನ್ನೆ ಮೊನ್ನೆ ನಗುನಗುತ್ತಲೇ ಸಾಮಾಜಿಕ ಮಾಧ್ಯಮದ ಕುರಿತು ಸಂದರ್ಶನವೊಂದರಲ್ಲಿ ಮಾತನಾಡುತ್ತಿದ್ದರು. ಟ್ರೋಲ್‌ಗಳನ್ನು ನಿಭಾಯಿಸುವುದು ಹೇಗೆ ಎನ್ನುವುದು ಅವರಿಗೆ ಎದುರಾದ ಪ್ರಶ್ನೆ.

ಲಾರಾ ಅವರಿಗೆ ಈಗ ನಲವತ್ತಾರು ವರ್ಷ. ಸೌಂದರ್ಯ ಸ್ಪರ್ಧೆಗಳಲ್ಲಿ ಅವರ ಅಳೆದೂ ತೂಗಿದಂತಹ ನಗುವನ್ನು ಕಂಡಿದ್ದ, ಅವರದ್ದೇ ವಾರಗೆಯವರಿಗೂ 'ಇಷ್ಟು ಬೇಗ ವಯಸ್ಸಾಯಿತೆ' ಎಂದೆನಿಸಿರಬಹುದು. ಇಂತಹ ಶೈಲಿಯ ಕಮೆಂಟುಗಳೇ ಸಾಮಾಜಿಕ ಮಾಧ್ಯಮದಲ್ಲೂ ಲಾರಾ ಅವರಿಗೆ ಆಗೀಗ ಕಾಣುತ್ತಿದೆ. 'ಬುಡ್ಡಿ ಹೋ ಗಯೀ' (ಮುದುಕಿಯಾದಳು), 'ಮೋಟಿ ಹೋ ಗಯೀ' (ದಪ್ಪಗಾದಳು) ಎಂಬೆಲ್ಲ ಕಮೆಂಟುಗಳನ್ನು ನೋಡಿದಾಗಲೆಲ್ಲ ಲಾರಾ ನೊಂದುಕೊಳ್ಳುವುದನ್ನು ಬಿಟ್ಟಿದ್ದಾರೆ. ಬದಲಿಗೆ, ಅವರಿಗೆ ಅಂಥವನ್ನು ಕಂಡರೆ ನಗು ಬರುತ್ತದೆ.

## ಟ್ರೋಲ್‌ಗೆ ಉಪೇಕ್ಷೆಯೇ ಮದ್ದು ಎಂದ ಲಾರಾ

ಟ್ರೋಲ್‌ಗಳಿಗೆ ಹೊಸಕಾಲದ ಎಷ್ಟೋ ನಟ–ನಟಿಯರು ಖಿನ್ನರಾಗುವುದನ್ನು ಕಂಡಿರುವ ಅವರು ಅದನ್ನು ನಿಭಾಯಿಸುವ ಸರಳ ದಾರಿಯನ್ನು ವಿವರಿಸಿದರು. ಸಾಮಾಜಿಕ ಮಾಧ್ಯಮ ಎನ್ನುವುದು ಚಟವಾಗದಂತೆ ಎಚ್ಚರ ವಹಿಸಬೇಕೆನ್ನುವುದು ಆ ದಾರಿಯ ಒನ್‌ಲೈನರ್.

'ನಮ್ಮ ಹಿತೈಷಿಗಳು ಸದಾ ನಮ್ಮೊಡನೆ ನಂಟು ಇಟ್ಟುಕೊಂಡಿರುತ್ತಾರೆ. ಸಾಮಾಜಿಕ ಮಾಧ್ಯಮದಲ್ಲೂ ಅಂಥವರೊಟ್ಟಿಗೆ ಸಂವಹನ ಮಾಡುವುದು ಹಿತಾನುಭವ. ಅದನ್ನು ನಾವು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಳ್ಳಬೇಕು. ಯಾವುದೋ ಪೋಸ್ಟ್‌ಗೆ ಟೀಕೆ ಮಾಡಿದವರಿಗೆ ಸಮಜಾಯಿಷಿ ಕೊಡಲು ಹೋಗಬಾರದು. ನಾನು ಮುದುಕಿಯಾದರೆ ಅಥವಾ ದಪ್ಪ ಆದರೆ ಅದರಿಂದ ಕಮೆಂಟ್ ಮಾಡಿದವರಿಗೆ ಏನೂ ಆಗಬೇಕಿಲ್ಲ. ಅಂಥವರಿಗೆ ಉತ್ತರ ಕೊಟ್ಟು ನನಗೂ ಏನೂ ಆಗಬೇಕಿಲ್ಲ. ಸಿನಿಮಾ ನಟಿಯರ ದೇಹಾಕಾರ, ಬಣ್ಣ, ರೂಪದ ಕುರಿತು ಟೀಕೆ ಮಾಡುವುದು ಈಗೀಗ ವ್ಯಾಪಕವಾಗಿದೆ. ತಮ್ಮ ಗುರುತು ಹೇಳಿಕೊಳ್ಳದೆ ಈ ರೀತಿ ಕಿಚಾಯಿಸುವ ಮಂದಿಗೆ ಅದೇನೋ ವಿಕೃತ ಆನಂದ. ಇಂಥವರಿಂದ, ಇವರ ಕಮೆಂಟುಗಳಿಂದ ದೂರ ಉಳಿಯುವುದು ಎಲ್ಲ ದೃಷ್ಟಿಯಲ್ಲಿಯೂ ಒಳ್ಳೆಯದು. ನಾನು ಅದನ್ನೇ ಮಾಡಿಕೊಂಡು ಬಂದಿರುವುದು' – ಹೀಗಿದೆ ಲಾರಾ ತತ್ವ.

ಅವರು ಈಗಲೂ ಅಭಿನಯದಲ್ಲಿ ತೊಡಗಿಕೊಂಡಿದ್ದಾರೆ. 'ರಣನೀತಿ: ಬಾಲಾಕೋಟ್ ಅಂಡ್ ಬಿಯಾಂಡ್' ವೆಬ್‌ಸರಣಿಯಲ್ಲಿ ನಟಿಸುತ್ತಿದ್ದಾರೆ. 'ವೆಲ್‌ಕಂ ಟು ದಿ ಜಂಗಲ್' ಎಂಬ ಹಿಂದಿ ಸಿನಿಮಾದಲ್ಲಿ ಅಕ್ಷಯ್‌ಕುಮಾರ್ ಹಾಗೂ ಇನ್ನಿತರ ನಟ–ನಟಿಯರ ಸಾಲಿನಲ್ಲಿ ಅವರೂ ಇದ್ದಾರೆ. ರಣಬೀರ್ ಕಪೂರ್ ರಾಮನಾಗಿ ನಟಿಸಲಿರುವ 'ರಾಮಾಯಣ'ದಲ್ಲೂ ಇವರಿಗೆ ಒಂದು ಪಾತ್ರವಿದೆ. ■





# ‘ರಾಮಾಯಣ’ಕ್ಕೆ ಯಶ್ ಸಹ ನಿರ್ಮಾಣ?

ನಿತೇಶ್ ತಿವಾರಿ ನಿರ್ದೇಶಿಸುತ್ತಿರುವ 'ರಾಮಾಯಣ' ಸಿನಿಮಾದಲ್ಲಿ ಯಾರು ಯಾವ ಪಾತ್ರ ಮಾಡಲಿದ್ದಾರೆ ಎನ್ನುವ ಕುರಿತೇ ದಿನಕ್ಕೊಂದು ಗಾಳಿಸುದ್ದಿ ತೇಲುತ್ತಿದೆ.

ಕನ್ನಡದ ನಟ ಯಶ್ ಈ ಚಿತ್ರದಲ್ಲಿ ರಾವಣನ ಪಾತ್ರ ಮಾಡುತ್ತಾರೆ ಎಂದು ಮೊದಲು ಸುದ್ದಿ ಹಬ್ಬಿತ್ತು. ಆ ಕುರಿತು ನಿರ್ದೇಶಕರು ಅವರೊಟ್ಟಿಗೆ ಚರ್ಚೆ ನಡೆಸಿದ್ದು ನಿಜವಾದರೂ, ಯಶ್ ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ದೊಡ್ಡ ಮೊತ್ತದ ಸಂಭಾವನೆಯನ್ನು ಅವರಿಗೆ ಕೊಡುವ ಮಾತುಕತೆ ಕೂಡ ನಡೆದಿತ್ತು. ಆ ಪಾತ್ರ ತಾವಾಗಲು ಒಪ್ಪದ ಯಶ್, ಚಿತ್ರದ ಸಹ ನಿರ್ಮಾಪಕರಾಗಲು ಸಮ್ಮತಿ ಸೂಚಿಸಿದ್ದಾರೆನ್ನುವುದು ಈಚಿನ ಗುಸುಗುಸು.

ರಣಬೀರ್ ಕಪೂರ್ ರಾಮನ ಪಾತ್ರದಲ್ಲಿ, ಸಾಯಿ ಪಲ್ಲವಿ ಸೀತಾಮಾತೆಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಸನ್ನಿ ಡಿಯೋಲ್ ಈ ಚಿತ್ರದಲ್ಲಿ ಹನುಮನಾಗಿಯೂ, ಬಾಬ್ಬಿ ಡಿಯೋಲ್ ಕುಂಭಕರ್ಣನಾಗಿಯೂ ಬಣ್ಣ ಹಚ್ಚಲಿದ್ದಾರೆ ಎಂಬ ಸುದ್ದಿಯೂ ಈಗ ತೇಲುತ್ತಿದೆ. ವಿಭೀಷಣನ ಪಾತ್ರಕ್ಕೆ ವಿಜಯ್ ಸೇತುಪತಿ ಅವರನ್ನು ಸೆಳೆಯುವ ಯತ್ನಗಳು ನಡೆದಿವೆ ಎನ್ನಲಾಗಿದೆ. ಲಾರಾ ದತ್ತ ಕೈಕೇಯಿ ಪಾತ್ರದಲ್ಲಿ ನಟಿಸುವುದು ಬಹುತೇಕ ನಿಕ್ಕಿಯಾಗಿದೆ. ಶೀಬಾ ಮಂಥರೆಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಈ ಪಾತ್ರವರ್ಗವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಕೆಲವರು, ಮಾಂಸಾಹಾರಿಗಳೆಲ್ಲ ರಾಮಾಯಣದ ಪಾತ್ರಧಾರಿಗಳಾಗುತ್ತಿದ್ದಾರೆ ಎಂದು ಚೇಷ್ಟೆ ಮಾಡುವ ಪ್ರಸಂಗಗಳೂ ನಡೆದಿವೆಯೆನ್ನಿ. ■